ಡಿಸೆಂಬರಿನ ಕ್ರಿಸ್‌ಮಸ್ ರಜೆಯಲ್ಲಿ ಇಂಡಿಯಾಕ್ಕೆ ಬಂದೆವು. ಮೂರು ತಿಂಗಳಲ್ಲಿ ತಾಯ್ನಾಡಿಗೆ ಹೋಗಿ ಬರುವಷ್ಟು ಅನುಕೂಲ ನನಗಿರಲಿಲ್ಲ. ನಾನವಳಿಗೆ ಅದನ್ನೇ ಹೇಳಿದೆ. ಯಾವ ಮಾತಿಗೂ ಅವಕಾಶವಿರದಂತೆ ಇಬ್ಬರ ಟಿಕೇಟುಗಳನ್ನು ಅವಳೇ ತೆಗೆದಳು. ಸ್ವಲ್ಪ ಸಂಕೋಚ, ಮುಜುಗರ ಆದರೂ ವಿಧಿ ಇರಲಿಲ್ಲ. ಹೋದ ಮಾರನೇ ದಿನವೇ ಅವಳ ಮನೆಗೆ ಕರೆದಳು. ಅವರ ಮನೆಯ ವೈಭವ ನೋಡಿ ಬೆರಗಾಗಿಬಿಟ್ಟೆ. ಅವಳ ತಂದೆ ದೊಡ್ಡ ಉದ್ಯಮಿ. ನಂದನಾ ಅದನ್ನು ನನ್ನೊಡನೆ ಹೇಳಿರಲಿಲ್ಲ. ಆ ಮನೆಯ ಏಕಮಾತ್ರ ಸಂತಾನ ಅವಳು. ತಂದೆ ಮಗಳಲ್ಲದೆ ಮನೆಯಲ್ಲಿ ಅಡಿಗೆಗೆ, ತೋಟ ನೋಡಿಕೊಳ್ಳಲು, ಡ್ರೈವರು... ಇತ್ಯಾದಿಯಾಗಿ ಆಳು ಕಾಳುಗಳು. ಗಮನಾರ್ಹವಾಗಿ ಅಲ್ಲಿ ಓಡಾಡಿಕೊಂಡಿದ್ದ ಹೇಮಾ ಎಂಬ ಸಾಧಾರಣ ರೂಪಿನ ಮಟ್ಟಸ ಎತ್ತರದ ಹುಡುಗಿ... ಮನೆಯ ಎಲ್ಲ ದೇಖರೇಕಿಗಳನ್ನು ಅವಳೇ ನಿಭಾಯಿಸುತ್ತಿದ್ದಳು. ಯಾರೆಂದು ಕೇಳಿದ್ದಕ್ಕೆ, 'ಅವಳೊಂಥರ ಈ ಮನೆಯ ಮಗಳಿದ್ದ ಹಾಗೆ, ನನ್ನ ತಂಗಿ ಅಂದುಕೊಳ್ಳಿ ಬೇಕಾದರೆ' ಅಂತ ನಕ್ಕಳು. ಆಗ ಅಲ್ಲೇ ಇದ್ದ ಅವರಪ್ಪ, 'ಇವರ ಮನೆಯವರು ಮೂರು ತಲೆಮಾರಿಂದ ನಮ್ಮನೇಲಿ ಕೆಲಸ ಮಾಡಿಕೊಂಡು ಬಂದರು. ಇವಳಪ್ಪ ಅಮ್ಮ ಗಂಗೆಯಲ್ಲಿ ದೋಣಿ ಮಗುಚಿ ಸತ್ತು ಹೋದರು ಐದಾರು ವರ್ಷದ ಹಿಂದೆ. ಈ ತಬ್ಬಲಿ ಮಗು ಇಲ್ಲೇ ಬೆಳಿತಿದೆ' ಎಂದರು ವಿಷಾದದಿಂದ. ನನಗೂ ಮನಸ್ಸು ಚುರಕ್ಕೆಂದಿತು. ಒಡನೆಯೇ ನಂದನಾ ಮತ್ತವಳ ತಂದೆಯ ಕರುಣೆ, ಔದಾರ್ಯ ಕಂಡು ಮನಸ್ಸು ತುಂಬಿ ಬಂತು.

ಅವಳೇನೋ ಅವಳಪ್ಪನಿಗೆ ನನ್ನ ಪರಿಚಯಿಸಿಬಿಟ್ಟಳು. ನಾನು ಅಮ್ಮನಿಗೆ ಹೇಳಬೇಕಿತ್ತು, ಹೇಳಿದೆ. ಜಾತಿ ಕೇಳಿ ಅಮ್ಮ ಭೂಮಿಗಿಳಿದು ಹೋದಳು. 'ಶ್ರಿಮತಸ್ಥರಲ್ಲಿ ಯಾರೂ ಸಿಕ್ಲಿಲ್ವ ನಿಂಗೆ... ಹೋಗಿ ಹೋಗಿ ಮಾಂಸ–ಮಡ್ಡಿ ತಿನ್ನೋರ್ನ ಮಾಡ್ಕೊತಿದ್ದಿಯಲ್ಲ' ಅಂತ ಅತ್ತಳು. ನಾನು ಕಲ್ಲಾಗಿದ್ದೆ. ಅಮ್ಮನನ್ನ ಅವರ ಮನೆಗೆ ಕರಕೊಂಡು ಹೋದೆ.

ಬೀಗರ ಮನೆಯ ವಹಿವಾಟು ವೈಭವ ನೋಡಿದ ಅಮ್ಮನಿಗೆ ಇದ್ದ ಅಸಮಾಧಾನ, ಅಸಂತೋಷ ಅರ್ಧಪಾಲು ಕಮ್ಮಿಯಾಯ್ತು. ಸೊಸೆಯಾಗುವವಳ ಅಂದಚೆಂದ ನೋಡಿ ಪೂರ್ತಿಯಾಗಿ ಹೊರಟುಹೋಯ್ತು. ನಾನೆಷ್ಟೇ ಹೇಳಿದರೂ ಈಗಲೇ ಬೇಡವೆಂದರೂ ಕೇಳದೆ ನನ್ನ ನಂದನಾರೆಡ್ಡಿಯ ನಿಶ್ಚಿತಾರ್ಥವನ್ನು ಪಂಚತಾರಾ ಮಹಲಿನಲ್ಲಿ ಅದ್ದೂರಿಯಾಗಿ ಮಾಡಿದರು. ಅಮ್ಮ ಬಹು ಪ್ರಯಾಸದಿಂದ ದುಡ್ಡು ಹೊಂದಿಸಿ ತಂದಿದ್ದ ಸೀರೆಯನ್ನು ನಂದನಾ ಉಟ್ಟುಕೊಳ್ಳಲಿಲ್ಲ. ಬದಲಾಗಿ ತನ್ನ ಮನೆಯ ಗೇಣಂಚಿನ ಜರತಾರಿ ಕಾಂಜೀವರಂ ಉಟ್ಟು, ಅಮ್ಮ ತಂದ ಸೀರೆಯನ್ನು ಒಂದು ಗಳಿಗೆ ಹೆಗಲ ಮೇಲೆ ಶಾಲುವಿನಂತೆ ಹಾಕ್ಕೊಂಡು ಅಮ್ಮನಿಗೆ ನಮಸ್ಕರಿಸಿ ಎದ್ದು, 'ಇದನ್ನೇ ಉಟ್ಕೊತಿದ್ದೆ. ತುಂಬಾ ಗೆಸ್ಟ್ ಬರ್ತಾರೆ, ಎಲ್ಲಾ ವಿ.ಐ.ಪಿಗಳು... ಹಾಗಾಗಿ' ಅಂತ ನಕ್ಕಳು. ಅಮ್ಮ ಪೆಚ್ಚಾದರೂ ತೋರಿಸಿಕೊಳ್ಳದೆ 'ನಿಂಗ್ ಹೇಗಿಷ್ಟವೋ ಹಾಗೇ ಮಾಡು' ಅಂದರು.

ಜನವರಿ ಹದಿನೆಂಟಕ್ಕೆ ನಿಶ್ಚಿತಾರ್ಥದ ಸಮಾರಂಭ ಮುಗಿದು ಇಪ್ಪತ್ತೆರಡಕ್ಕೆ ನಾವಿಬ್ಬರು ಹೊರಡಬೇಕಿತ್ತು. ನಡುರಾತ್ರಿ ಮೂರು ಗಂಟೆಗೆ ವಿಮಾನ. ಹಿಂದಿನ ರಾತ್ರಿಯೇ ನಾನಲ್ಲಿಗೆ ಹೋಗಿದ್ದೆ. ವಿಧವಿಧದ ತಿಂಡಿ ತಿನಿಸುಗಳು, ರೆಡಿಮೇಡ್ ಫುಡ್‌ಗಳ ದೊಡ್ಡ ಬ್ಯಾಗೊಂದು ನನಗಾಗಿ ಸಜ್ಜಾಗಿತ್ತು. ಹೇಮಾ ಬಂದು ಭಾರವಾದ ಬ್ಯಾಗನ್ನು ನನಗೆ ಕೊಡುತ್ತಾ, 'ಭಾವ, ಇದ್ರಲ್ಲಿ ಚಟ್ನಿಪುಡಿ, ಉಪ್ಪಿನಕಾಯಿ, ಗೊಜ್ಜವಲಕ್ಕಿ ಎಲ್ಲಾ ಇದೆ. ಹಳದೀರಾಮ್ಸ್‌ದು ಸೊಹನ್‌ಪಪ್‌ಡಿ, ಆಶಾ ಸ್ವೀಟ್ಸ್‌ದು ಕಾಜೂ ಕತ್ಲಿ ಇನ್ನು ಏನೇನೋ ಇದೆ... ಹೋದ ತಕ್ಷಣ ಎಲ್ಲ ಫ್ರಿಡ್ಜ್‌ಗೆ ಸೇರಿಸ್ಕೊಳಿ. ಪುಡಿ, ಗೊಜ್ಜು ಎಲ್ಲಾನೂ ಆಲಮೇಲಮ್ಮ ಅಂತ ಬ್ರಾಹ್ಮಣ ಹೆಂಗಸು ಮನೆಗೇ ಬಂದು ಮಾಡಿಕೊಟ್ಟು ಹೋದ್ರು. ನಂದಕ್ಕನ ಜೊತೆಗೆ ನಿಮಗೂ ಎಲ್ಲ ಮಾಡ್ಸಿದೀನಿ' ಅಂದಳು. 'ಅಯ್ಯೋ... ಇದನ್ನೆಲ್ಲ ಅಮ್ಮನೇ ಮಾಡ್ತಿದ್ರಲ್ಲ' ಅನ್ನಿಸ್ತು. ಅವರ ಮನೆಯ ಶ್ರೀಮಂತ ಭೋಜನದ ನಂತರ ಒಂದೆರೆಡು ತಾಸು